

ನೇತ್ರದಾನ ಪಡೆಯುವುದು ಎಲ್ಲರಿಗೂ ಗೊತ್ತಾಗುತ್ತದೆ. ಆದರೆ, ಹಾಗೆ ಪಡೆದ ಕಣ್ಣುಗಳನ್ನು ಯಾರಿಗೆ ಅಳವಡಿಸಲಾಗಿದೆ ಎಂಬುದು ಕೇವಲ ವೈದ್ಯರಿಗೆ ಹೊರತಾಗಿ ಬೇರೆ ಯಾರಿಗೂ ಗೊತ್ತಾಗದಂತೆ ರಹಸ್ಯ ಕಾಪಾಡಿಕೊಳ್ಳಲಾಗುತ್ತದೆ. ನೇತ್ರದಾನ ವಿಚಾರದಲ್ಲಿ ರಹಸ್ಯ ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯ. ರಾಜ್‌ಕುಮಾರ್ ಅವರ ಕಣ್ಣುಗಳು ಯಾರಿಗೆ ನೀಡಲಾಗಿದೆ ಅನ್ನೋದು ಇಂದಿಗೂ ಗುಟ್ಟಾಗಿಯೇ ಉಳಿದಿದೆ. ಅದು ಗೊತ್ತಾದರೆ ಪರಿಸ್ಥಿತಿಯೇ ಬೇರೆ. ಸ್ವತಃ ರಾಜ್‌ಕುಮಾರ್ ಅವರ ಕುಟುಂಬಸ್ಥರಿಗೆ ಆ ಮಾಹಿತಿ ಇಲ್ಲ. ಅವರೂ ಕೇಳಲೂ ಇಲ್ಲ. ನಾವೂ ಹೇಳಲೂಬಾರದು.

**ಡಾ. ಭುಜಂಗ ಶೆಟ್ಟಿ**, 'ನಾರಾಯಣ ನೇತ್ರಾಲಯ'ದ ಮುಖ್ಯಸ್ಥ

ಏನೆಲ್ಲ ಪ್ರಯತ್ನ ನಡೆದರೂ ವಿಫಲವಾಗುತ್ತಿದೆ. ನೇತ್ರದಾನ ಮಾಡಲು ಜನರನ್ನು ಯಾವುದೋ ಬಲವಾದ ಕಾರಣ ತಡೆಯುತ್ತಿದೆ' ಎನ್ನುವಾಗ ಸುಜಾತಾ ಅವರ ಮಾತಿನಲ್ಲಿ ವಿಷಾದ ಇಣುಕುತ್ತದೆ.

'ಬದುಕಿನ ಉದ್ದೇಶ ಜೀವಂತವಾಗಿದ್ದಾಗ ನಮ್ಮಿಂದ ಯಾರಿಗಾದರೂ ಸಹಾಯವಾಗಬೇಕು ಅನ್ನೋದು. ಹಾಗಿರುವಾಗ, ಸತ್ತ ಮೇಲೂ ನಮ್ಮ ಕಣ್ಣು ಉಪಯೋಗಕ್ಕೆ ಬರುವುದಾದರೆ ಯಾಕೆ ದಾನ ಮಾಡಬಾರದು. ಒಬ್ಬರ ನೇತ್ರದಾನದಿಂದ ಇಬ್ಬರಿಗಿಂತ ಹೆಚ್ಚು ಮಂದಿಗೆ ದೃಷ್ಟಿ ಸಿಗುತ್ತದೆ. ನಾವು ಇಲ್ಲವಾದಾಗ ನಮ್ಮ ಕಣ್ಣುಗಳ ಮತ್ತೊಬ್ಬರ ಮೂಲಕ ಜಗತ್ತು ನೋಡಬೇಕು. ಅದು ಅವರಿಗೂ ಬದುಕು ಕೊಟ್ಟಂತೆ. ಆಸ್ತಿಯನ್ನು ನಾವು ವಿಲ್ ಮಾಡಿಡುವುದು ವಾಡಿಕೆ. ಈ ಕಣ್ಣುಗಳೂ ಜನರ ಆಸ್ತಿಯೇ. ಅವುಗಳನ್ನು ದಾನದ ರೂಪದಲ್ಲಿ ವಿಲ್ ಮಾಡಿಡಿ. ಜಸ್ಟ್ ಎ ವಿಲ್, ಲೀವ್ ಎ ವಿಷನ್' ಎನ್ನುವ ಡಾ. ಸುಜಾತ ಅವರ ಮನದ ಮಾತು ಎಲ್ಲರ ಮನಸ್ಸಿಗೂ ತಲುಪಿಸುವ ಕೆಲಸ ಆಂದೋಲನದಂತೆ ನಡೆಯಬೇಕಿದೆ.

**ಕಣ್ಣು ಮತ್ತು ಗಡಿಯಾರ**

ಯಾವುದೇ ವಯೋಮಾನದವರಿಗೂ ದೃಷ್ಟಿಯ ಕಸಿ ಮಾಡಬಹುದು. ನೇತ್ರದಾನ ಮಾಡಲು ಹಾಗೂ ನೇತ್ರದಾನ ಪಡೆಯಲು ವಯಸ್ಸಿನ ಮಿತಿಯಿಲ್ಲ. ಇಲ್ಲೊಂದು ವಿಷಯ ಸ್ಪಷ್ಟಪಡಿಸಬೇಕು. ದಾನಿಗಳಿಂದ ಕಣ್ಣು ಲಭ್ಯವಾದರೆ ದೃಷ್ಟಿಹೀನರಿಗೆಲ್ಲ ಕಣ್ಣು ಬರುತ್ತದೆ ಎನ್ನುವುದು ನಿಜವಲ್ಲ. ಯಾವ ಕಾರಣಕ್ಕೆ ದೃಷ್ಟಿಹೀನರಾಗಿದ್ದಾರೆ ಎನ್ನುವುದನ್ನು ಮೊದಲು ತಪಾಸಣೆ ಮಾಡಬೇಕು. ಕೆಲವರಲ್ಲಿ ಕಣ್ಣಿನ ಗುಡ್ಡೆಯೇ ಸರಿಯಾಗಿ ಬೆಳೆದಿರುವುದಿಲ್ಲ. ಅದಕ್ಕೆ ನರಕ್ಕೆ ಹಾನಿ ಹಾಗೂ ಕಣ್ಣಿನ ರಚನೆ ಸರಿಯಾಗಿ ಆಗದಿರುವುದು ಕಾರಣವಾಗಿರುತ್ತದೆ. ಅಂಥವರಿಗೆ ಏನೇ ಮಾಡಿದರೂ ದೃಷ್ಟಿ ಬಾರದು. ಕೆಲವು ಮಕ್ಕಳಿಗೆ ಹುಟ್ಟಿನಿಂದಲೇ ಕಣ್ಣಿನಲ್ಲಿ ಪೊರೆ ಬೆಳೆದಿರುತ್ತದೆ. ಆ ಪೊರೆ ತೆಗೆದರೆ ದೃಷ್ಟಿ ಬರುತ್ತದೆ. ಅದನ್ನು 'ವಾಸಿಯಾಗಬಲ್ಲ/ಸರಿಪಡಿಸಬಲ್ಲ ಕುರುಡುತನ' ಎಂದು ಕರೆಯಲಾಗುತ್ತದೆ. ತಪಾಸಣೆ ಮಾಡಿ ಅಂಥದ್ದ ಸಮಸ್ಯೆಗೆ ಪರಿಹಾರ ಕೊಡಬಹುದು. ಅದಕ್ಕೆ ನೇತ್ರದಾನಿಗಳ ಅಗತ್ಯ.

ನೇತ್ರದಾನದಿಂದ ಯಾರಿಗೆ ಹೇಗೆ ಉಪಯೋಗ ಎನ್ನುವ ಬಗ್ಗೆ 'ನಾರಾಯಣ ನೇತ್ರಾಲಯ'ದ ಮುಖ್ಯಸ್ಥರಾದ ಡಾ. ಭುಜಂಗ ಶೆಟ್ಟಿ ವಿವರಿಸುವುದು ಹೀಗೆ:

''ದಾನಿಗಳು ಕೊಟ್ಟ ಕಣ್ಣನ್ನು ಅಂಧರಿಗೆ ಶಸ್ತ್ರಚಿಕಿತ್ಸೆ ಮಾಡಿ ಅಳವಡಿಸಿದರೆ ದೃಷ್ಟಿ ಬರುತ್ತದೆ ಎಂಬ ತಪ್ಪು ತಿಳಿವಳಿಕೆ ಸಮಾಜದಲ್ಲಿದೆ. ಕಣ್ಣು ನಮ್ಮ ಕೈಗಡಿಯಾರ ಇದ್ದಂತೆ. ಗಡಿಯಾರದ ಒಳಗಿನ ಯಂತ್ರ ಚೆನ್ನಾಗಿದ್ದರೆ, ಅದು ಗಂಟೆ, ನಿಮಿಷ ಹಾಗೂ ಸೆಕೆಂಡ್‌ಗಳನ್ನು ಸರಿಯಾಗಿ ತೋರಿಸುತ್ತದೆ. ಆದರೆ, ಗಡಿಯಾರದ ಮೇಲಿನ ಗಾಜಿಗೆ ಡ್ಯಾಮೇಜ್ ಆಗಿದೆ ಎಂದರೆ, ವಾಚ್ ಇದ್ದೂ ಏನೂ ಪ್ರಯೋಜನವಿಲ್ಲ. ಕಣ್ಣಿನ ವಿಷಯವೂ ಅಷ್ಟೇ; ಕಣ್ಣಿನ ರಚನೆ ಚೆನ್ನಾಗಿದ್ದೂ ವಾಚ್‌ನ ಗಾಜಿನಂತೆ ಕಣ್ಣಿನ 'ಮುಂಭಾಗ' (ಕಾರ್ನಿಯಲ್) ಚೆನ್ನಾಗಿಲ್ಲ ಅಂದರೆ ಕುರುಡುತನ ಉಂಟಾಗುತ್ತದೆ. ಕಣ್ಣಿನ ಗಾಜು ಸರಿಯಾಗಿಲ್ಲದೇ ದೃಷ್ಟಿ ಕಳೆದುಕೊಂಡ ಲಕ್ಷಾಂತರ ಮಂದಿ ನಮ್ಮ ದೇಶದಲ್ಲಿ ಇದ್ದಾರೆ. ಅಂಥವರಿಗೆ ದಾನಿಗಳ ಅವಶ್ಯಕತೆ ಇದೆ. ಹೀಗಾಗಿ ದಾನಿಗಳಿಂದ ಕಣ್ಣು ದಾನ ಪಡೆದು ಅದನ್ನು ಅವಶ್ಯಕತೆ ಇದ್ದವರಿಗೆ ನೀಡಿ ದೃಷ್ಟಿ ಬರುವಂತೆ ಮಾಡಲಾಗುತ್ತದೆ.''

ಡಾ. ಭುಜಂಗಶೆಟ್ಟಿ ಅವರ ಮಾತು ಮುಂದುವರೆಯುತ್ತದೆ: ''ಪ್ರಪಂಚದಲ್ಲಿ ಇಡೀ ಕಣ್ಣನ್ನೂ ಯಾರೂ ಬದಲಿಸುವುದಿಲ್ಲ. ಮೇಲೆ ತಿಳಿಸಿರುವಂತೆ ಬರೀ ಗ್ಲಾಸ್ ಬದಲಿಸುತ್ತಾರೆ.

## ನೇತ್ರದಾನ ಪ್ರಕ್ರಿಯೆ

- ನೇತ್ರದಾನಕ್ಕೆ ವಯೋಮಿತಿ ಇಲ್ಲ. ಯಾರು ಬೇಕಾದರೂ ನೇತ್ರದಾನ ಮಾಡಬಹುದು.
- ಸಕ್ಕರೆ ರೋಗ, ರಕ್ತದ ಒತ್ತಡ, ಪೊರೆ ರೋಗ, ಕನ್ನಡಕ ಧಾರಣೆ ಯಾವವೂ ನೇತ್ರದಾನಕ್ಕೆ ಅಡ್ಡಿ ಬರುವುದಿಲ್ಲ.
- ಕ್ಯಾನ್ಸರ್, ಸೆಪ್ಟಿ ಸಿಮಿ (ಪೂರ್ತಿ ದೇಹ ಸೋಂಕು) ಆಗಿದ್ದರೆ, ವಿಷ ಹರಡಿದ್ದರೆ (ಟಾಕ್ಸಿಕ್ ಸಂಬಂಧಿತ), ಎಚ್‌ಐವಿಯಿಂದ ಬಳಲುತ್ತಿದ್ದ ಮೃತರಿಂದ ಕಣ್ಣುಗಳನ್ನು ಪಡೆಯುವುದಿಲ್ಲ. ಒಂದು ವೇಳೆ ಪಡೆದರೂ ಅವುಗಳನ್ನು ಸಂಶೋಧನೆಗೆ ಬಳಸಲಾಗುತ್ತದೆ.
- ಯಾವುದೇ ಶಸ್ತ್ರಚಿಕಿತ್ಸೆಗೆ ಒಳಗಾದ ವ್ಯಕ್ತಿಯು ಸಹ ನೇತ್ರದಾನ ಮಾಡಬಹುದು.
- ಮರಣಿಸಿದ ವ್ಯಕ್ತಿ ನೇತ್ರದಾನಿಯಾಗಿರಬೇಕಿಲ್ಲ. ಮೃತರ ಸಂಬಂಧಿಕರು ನಿರ್ಧರಿಸಿದರಾಯಿತು.
- ಯಾರಾದರೂ ಮೃತಪಟ್ಟ ಕೂಡಲೇ ಹತ್ತಿರದ ನೇತ್ರದಾನ ಕೇಂದ್ರಕ್ಕೆ ಮಾಹಿತಿ ನೀಡಿ.
- ಮೃತರ ಕಣ್ಣು ರೆಪ್ಪೆಗಳು ತೆರೆದಿದ್ದರೆ, ಅವುಗಳನ್ನು ಮುಚ್ಚಿಡಿ.
- ತಲೆದಿಂಬು ಮತ್ತಿತರ ಮೆತ್ತನೆಯ ಬಟ್ಟೆಯನ್ನು ಇಟ್ಟು ಮೃತರ ತಲೆಯನ್ನು ಸ್ವಲ್ಪ ಎತ್ತರಿಸಿ.
- ವಿದ್ಯುತ್ ಪಂಕವನ್ನು (ಫ್ಯಾನ್) ನಿಲ್ಲಿಸಿ.
- ಸಾಧ್ಯವಾದರೆ ಪಾಲಿಥೀನ್ ಚೀಲದಲ್ಲಿ ಮಂಜುಗಡ್ಡೆಯನ್ನು ಹಾಕಿ ಅಥವಾ ಬಟ್ಟೆಯನ್ನು ಒದ್ದೆ ಮಾಡಿ ಮೃತರ ಹಣೆಯ ಮೇಲಿರಿಸಿ.
- ಸ್ಥಳಕ್ಕೆ ಬರುವ ನೇತ್ರದಾನ ಸಿಬ್ಬಂದಿಗೆ ಕಣ್ಣುಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡಿ.
- ವ್ಯಕ್ತಿ ಮರಣಿಸಿದ ಯಾವುದೇ ಸ್ಥಳದಲ್ಲಿ ಮನೆ, ಆಸ್ಪತ್ರೆ, ಶವಾಗಾರ, ಇನ್ನಾವುದೇ ಸ್ಥಳದಿಂದ ನೇತ್ರಗಳನ್ನು ಸಂಗ್ರಹಿಸಲಾಗುತ್ತದೆ.
- ನೇತ್ರ ಸಂಗ್ರಹಣೆಗೆ ಬೇಕಾಗುವ ಸಮಯ ಕೇವಲ 20 ನಿಮಿಷ.
- ನೇತ್ರ ಸಂಗ್ರಹಣೆಯ ನಂತರ ಮೃತರ ಮುಖ ಯಾವುದೇ ರೀತಿ ವಿಕಾರವಾಗುವುದಿಲ್ಲ.
- ವ್ಯಕ್ತಿ ಮರಣವಾದ 6 ಗಂಟೆಯೊಳಗೆ ನೇತ್ರಗಳನ್ನು ಸಂಗ್ರಹಿಸಬೇಕು. 6 ಗಂಟೆಯ ನಂತರ ಮೃತರ ನೇತ್ರಗಳು ಪ್ರಯೋಜನಕ್ಕೆ ಬರುವುದಿಲ್ಲ.
- ಒಬ್ಬ ವ್ಯಕ್ತಿ ದಾನ ಮಾಡಿದ ನೇತ್ರಗಳು ಇಬ್ಬರು ಕಾರ್ನಿಯಾ ಅಂಧರಿಗೆ ದೃಷ್ಟಿ ಮರಳಿ ನೀಡುತ್ತದೆ.